ISSN: 0302-9832

# SHODHAK

A Journal of Historical Research

Volume: 53, Issue: 02, No: 10, May - August : 2023

Editor : Dr. Ram Pande

Mailing Address:
**SHODHAK**
B-424, Malviya Nagar, Jaipur-302017
e-mail : shodhakjournal@gmail.com

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

INDEX



| S.No | TITLE | Page No. |
|---|---|---|
| 1 | ವಸಾಹತುಕಾಲೀನ ಹೈದ್ರಾಬಾದ್ ಕರ್ನಾಟಕದಲ್ಲಿ ಕನ್ನಡದ ಅಸ್ಮಿತೆಯ ಹೋರಾಟಗಳು | 1 |
| 2 | ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ | 5 |
| 3 | "विद्यार्थियों की शैक्षिक शिथिलता का अध्ययन" | 11 |
| 4 | BUYING BEHAVIOUR OF CONSUMERS TOWARDS GREEN PRODUCTS –AN ANALYTICAL STUDY | 16 |
| 5 | THE RISE AND FALL OF THE DALIT PANTHERS MOVEMENT: AN APPRAISAL | 22 |
| 6 | HERSTORY IN THE MAKING: KASHMIRI WOMEN'S ROLE IN THE PEOPLE'S MOVEMENTS | 29 |
| 7 | INFORMATION TECHNOLOGY,CHALLENGES IN E-BANKING STRATEGY | 36 |
| 8 | MAPPING THE GLOBAL LANDSCAPE OF THE STRUCTURE CONDUCT PERFORMANCE APPROACH: A BIBLIOMETRIC ANALYSIS | 39 |
| 9 | ANALYSIS OF CUSTOMER AWARENESS AND LEVEL OF SATISFACTION: WITH INDIA POST PAYMENTS BANK SERVICES IN REWARI DISTRICT, HARYANA | 54 |
| 10 | "SOCIO-ECONOMIC DISPARITIES IN THE WESTERN HIMALAYA: A MICRO-LEVEL STUDY OF THE UTTARKASHI DISTRICT, UTTARAKHAND (INDIA)" | 62 |
| 11 | GIRLS' EDUCATION IN THE 21ST CENTURY IN INDIA | 71 |
| 12 | OVERPOPULATION, AGEING POPULATION AND FALLING BIRTH RATES-THREE CHALLENGES OF THE WORLD POPULATION | 78 |
| 13 | LEGAL ANALYSIS OF THE RIGHTS OF THE FEMALE PRISONER UNDER THE CONSTITUTION OF INDIA | 84 |
| 14 | MIGRANT CHILDREN: SOCIAL INTEGRATION IN THE INDIAN EDUCATION SYSTEM | 90 |
| 15 | JOB SATISFACTION TOWARDS WOMEN EMPLOYEES OF IT SECTOR WITH SPECIAL REFERENCE TO COIMBATORE | 101 |
| 16 | CONSUMER PREFERENCES OF KENTUCKY FRIED CHICKEN WITH SPECIAL REFERENCE OF COIMBATORE DISTRICT | 108 |
| 17 | A STUDY ON CUSTOMER PERCEPTION AND SATISFACTION TOWARDS MOBILE MARKETING MANAGEMENT | 116 |
| 18 | A STUDY ON CUSTOMER SATISFACTION TOWARDS E-LEARNING APPLICATION WITH SPECIAL REFERENCE TO COIMBATORE CITY | 123 |



CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

Shodhak : A Journal of Historical Research
ISSN : 0302-9832
Volume: 53, Issue: 02, No: 10, May - August : 2023

# ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ

**ಡಾ.ನಿಂಗಮ್ಮ ಗದಗ** ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ ಕೆ.ಎಲ್.ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗ-582 102 ಮೇಲ್ ಐಡಿ – tulsigadag@gmail.com

**ಡಾ. ವಿಠ್ಠಲ ಕೋಳಿ** ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ ಕೆ.ಎಲ್.ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗ-582 102 ಮೇಲ್.ಐಡಿ - vithalkoli1@gmail.com

ಭಾರತೀಯ ಚರಿತ್ರೆ ಎಂದರೆ ಅದು ಪುರುಷ ಕೇಂದ್ರಿತ ಅನಾವರಣವೇ ಆಗಿದೆ. ಇಲ್ಲಿ ಪ್ರಬಲ ಜಾತಿ ಧರ್ಮಿಯರು ಸ್ಥಾನವನ್ನು ಪಡೆದುಕೊಂಡಿದ್ದಾರೆ. ಚರಿತ್ರೆಯಲ್ಲಿ ಸಬಾಲ್ಟ್ರನ್ ವರ್ಗದ ಮಹಿಳೆಯರು, ದಲಿತರು, ಕಾರ್ಮಿಕರು ನಗಣ್ಯರಾಗಿದ್ದಾರೆ. ವಸಾಹತು ಕಾಲಘಟ್ಟದ ಭಾರತೀಯ ಚರಿತ್ರೆಯಲ್ಲಿ ಸ್ವಾತಂತ್ರ್ಯದ ಹೋರಾಟ ಹಾಗೂ ಏಕೀಕರಣ ಚಳವಳಿಗಳು ಒಟ್ಟೊಟ್ಟಿಗೆ ನಡೆದ ಎರಡು ಪ್ರಮುಖ ಸಂಗತಿಗಳು. ಇಲ್ಲಿಯೂ ಸಹ ಪುರುಷರು ಮುಖ್ಯ ನೆಲೆಯಲ್ಲಿ ಕಂಡುಬರುತ್ತಾರೆ. ಅವರಿಗೆ ಭೌತಿಕವಾಗಿ ಬೆಂಬಲ ನೀಡಿದ್ದು ಮಹಿಳೆಯರು. ಈ ಕಾಲಕ್ಕೆ ಶ್ರೀಮಂತ ವರ್ಗದ ಮಹಿಳೆಯರು ಆದಾಗಲೇ ಸಾಮಾಜಿಕ ಸುಧಾರಣೆ, ಶೈಕ್ಷಣಿಕ ಬೆಳವಣಿಗೆ ಹಾಗೂ ಮಹಿಳಾ ವಿಮೋಚನೆಯಂಥ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಇವರು ತಮ್ಮ ಕುಟುಂಬದವರ ಬೆಂಬಲದಿAದ ರಾಷ್ಟ್ರçÃಯ ಹಾಗೂ ಸಾಮಾಜಿಕ ಚಳವಳಿಗಳಲ್ಲಿ ಭಾಗವಹಿಸತೊಡಗಿದರು. ಇವರಲ್ಲದೆ ಗ್ರಾಮೀಣ ಭಾಗದಲ್ಲೂ ಸಹ ಅನೇಕ ಮಹಿಳೆಯರು ನಾಡು-ನುಡಿ-ರಾಷ್ಟ್ರçÃಯ ಚಳವಳಿಗಳಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ತಮ್ಮ ಮನೆಯ ಪುರುಷರಿಗೆ ನಾಡು-ನುಡಿ, ರಾಷ್ಟ್ರçÃಯ ಹೋರಾಟಗಳಿಗೆ ನೈತಿಕ ಹಾಗೂ ಭೌತಿಕ ಬೆಂಬಲವನ್ನು ನೀಡುತ್ತಿದ್ದುದು ಮುಖ್ಯ ಸಂಗತಿ. ಗಾಂಧಿಯವರು 1920-21ರ ಕಾಲಕ್ಕೆ ಭಾರತೀಯ ಸ್ವಾತಂತ್ರ್ಯದ ಹೋರಾಟದಲ್ಲಿ ಎಲ್ಲಾ ವರ್ಗದ ಜನರು ಪಾಲ್ಗೊಳ್ಳಬೇಕೆಂದು ಮೊದಲ ಬಾರಿಗೆ ಕರೆ ನೀಡಿದರು. ಅದಕ್ಕಾಗಿ ಅವರು ಕರ್ನಾಟಕಕ್ಕೂ ಭೇಟಿ ಕೊಟ್ಟರು. ಇದೇ ಹೊತ್ತಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ಪರಿಕಲ್ಪನೆ ಕನ್ನಡಿಗರಲ್ಲೂ ಮೂಡಿದ್ದು ಗಮನಾರ್ಹ. ಗಾಂಧಿಯವರ ವಿಚಾರಗಳನ್ನು, ರಾಷ್ಟ್ರçÃಯ ಚಿಂತನೆಗಳನ್ನು ಸ್ಥಳೀಯ ಭಾಷೆಯ ಮೂಲಕ ಪ್ರಚಾರ ಮಾಡತೊಡಗಿದರು. ಸ್ವಾತಂತ್ರ್ಯದ ಹೋರಾಟದಲ್ಲಿ ತೊಡಗಿಕೊಂಡ ಪುರುಷರು ಸೆರೆವಾಸವನ್ನು ಅನುಭವಿಸುತ್ತಿರುವಾಗ ಹೋರಾಟವನ್ನು ಮುಂದುವರೆಸಿಕೊAಡು ಹೋಗುವ ಹೊಣೆಗಾರಿಕೆ ಮಹಿಳೆಯರ ಮೇಲಿತ್ತು. ಸತ್ಯಾಗ್ರಹ, ರಚನಾತ್ಮಕ ಕಾರ್ಯಗಳ ಮೂಲಕ ಅಸಹಕಾರ ಚಳವಳಿಗಳಿಗೆ ಗಾಂಧೀಯವರು ತೀವ್ರತರವಾದ ರೂಪು ಕೊಟ್ಟರು. ರಾಷ್ಟ್ರçÃಯ ಚಳವಳಿಗಳಲ್ಲಿ ಮಹಿಳೆಯರು ಹೆಚ್ಚಾಗಿ ಪಾಲ್ಗೊಳ್ಳಲು ಗಾಂಧೀಯವರು ಪ್ರೇರೆಪಿಸಿದರು. ಮಹಿಳೆಯರ ರಚನಾತ್ಮಕ ಕಾರ್ಯಗಳಲ್ಲಿ ಹೆಚ್ಚು-ಹೆಚ್ಚು ತೊಡಗಿಕೊಂಡರು. ಈ ಮೂಲಕ ಗಾಂಧೀಯವರು ಸಮಾಜಕ್ಕೆ ಸ್ವದೇಶಿ ಚಿಂತನೆಗಳೊAದಿಗೆ, ಸ್ವದೇಶಿ ವಸ್ತು ಬಳಕೆಗೆ ಹೆಚ್ಚಿನ ಒತ್ತನ್ನು ಕೊಟ್ಟರು. ರಚನಾತ್ಮಕ ಕಾರ್ಯಗಳ ಮೂಲಕ ಕೈಗೊಳ್ಳುವ ಚಳವಳಿಯ ರೂಪರೇಷಗಳು ಮಹಿಳೆಯರ ಮನೋಬಲಕ್ಕೆ ಸೂಕ್ತವಾದಂತವಾಗಿದ್ದವು. ಕರ್ನಾಟಕದಲ್ಲಿ ನಾಡು-ನುಡಿ, ರಾಷ್ಟ್ರçÃಯ ಚಳವಳಿಯಲ್ಲಿ ಹೋರಾಡಿದ ಪ್ರಮುಖ ಮಹಿಳೆಯರಲ್ಲಿ ಜಯದೇವಿತಾಯಿ ಲಿಗಾಡೆ, ಉಮಾಬಾಯಿ ಕುಂದಾಪುರ, ಕೃಷ್ಣಾಬಾಯಿ ಪಣಜಿಕರ ಅವರಂಥ ಮಹಿಳೆಯರು ತಮ್ಮ ಚಟುವಟಿಕೆಗಳನ್ನು ಪ್ರಸಿಡೆನ್ಸಿಯಾಚೆ ವ್ಯಾಪಕಗೊಳಿಸಿದ್ದರು. ಕರ್ನಾಟಕದಲ್ಲಿ ಪ್ರತಿ ಭಾಗದಿಂದಲೂ ಮಹಿಳೆಯರು ಚಳವಳಿಯಲ್ಲಿ ಭಾಗವಹಿಸುವಂತಾಯಿತು. ಬಳ್ಳಾರಿ ಸಿದ್ದಮ್ಮ, ನಾಗಮ್ಮ ಪಾಟೀಲ್, ಸುಬ್ಬಮ್ಮ ಜೋಯಿಸ್, ಟಿ.ಸುನಂದಮ್ಮ, ಯಶೋದರಮ್ಮ ದಾಸಪ್ಪ, ನಾಗರತ್ನಮ್ಮ ಹಿರೇಮಠ, ಪದ್ಮಾವತಿ ಬಿದರಿ, ಶಕುಂತಲಾ ಕುರ್ತುಕೋಟಿ, ಚೆನ್ನಮ್ಮ ಹಳ್ಳಿಕೇರಿ ಇನ್ನೂ ಅನೇಕ ಮಹಿಳೆಯರು ರಾಜಕೀಯ, ಸಾಮಾಜಿಕ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಬ್ರಿಟಿಷರ ಆಡಳಿತ ನೀತಿಯನ್ನು ವಿರೋಧಿಸಿ ಅನೇಕ ಮಹಿಳೆಯರು ಕಾನೂನುಭಂಗ ಚಳವಳಿಯಲ್ಲಿ ತೊಡಗಿಸಿಕೊಂಡರು. ಮನೆ ಹೊಲಗಳ ಹರಾಜನ್ನು ವಿರೋಧಿಸಿ ಆಸ್ತಿಯನ್ನು ಕೊಂಡುಕೊAಡವರ ಮನೆಯ ಮುಂದೆಯೇ ಸತ್ಯಾಗ್ರಹಕ್ಕೆ ಕುಳಿತರು. ಅಂಥವರಲ್ಲಿ ಗೌರಮ್ಮ, ಕಾವೇರಮ್ಮ, ಲಕ್ಷಮ್ಮ, ದುಗ್ಗಮ್ಮ, ಅಕ್ಕುಂಜಿ, ಸುಬ್ಬಮ್ಮ ಜೋಯಿಸರು ಪ್ರಮುಖರು. ಈ ಥರನಾಗಿ ಪುರುಷರ ಸಮವಾಗಿ ಹೋರಾಡಿದ ಹಲವು ಮಹಿಳೆಯರಿದ್ದಾರೆ. ಪುರುಷರ ಸಮವಾಗಿ



CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College

**Shodhak** : A Journal of Historical Research
ISSN : **0302-9832**
Volume: **53**, Issue: **02**, No: **10**, May - August : **2023**
ಹೋರಾಡಿದ ಹಲವು ಮಹಿಳೆಯರಿದ್ದಾರೆ. ಅಂಥ ಕೆಲ ಮಹಿಳೆಯರ ಕುರಿತು ಈ ಕೆಳಗಿನಂತೆ ನೋಡಬಹುದು.

**ಮಹಾದೇವಿತಾಯಿ ದೊಡ್ಡಮನಿ ಹೆಗಡೆ**

ಮಹಾದೇವಿ ಅವರು ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ಹತ್ತನೇ ವರ್ಷಕ್ಕೆ ವಿವಾಹವಾಗಿ ಮರು ವರ್ಷವೇ ವಿದವೆಯಾದರು. ಆ ಕಾಲಕ್ಕೆ ಗಾಂಧಿ ಚಳವಳಿ ತೀವ್ರಗೊಂಡು ಸರ್ದಾರ್ ವೆಂಕಯ್ಯನವರು ಕುಟುಂಬ ಸಮೇತ ಸಿದ್ದಾಪುರಕ್ಕೆ ಬಂದಿದ್ದರು. ವೆಂಕಯ್ಯನವರೇ ಮಹಾದೇವಿ ಅವರು ಸ್ವಾತಂತ್ರ‍್ಯದ ಹೋರಾಟಕ್ಕೆ ತೊಡಗಿಕೊಳ್ಳಲು ಪ್ರೇರಣೆ ನೀಡಿದ್ದರು. ಮಹಾದೇವಿ ಅವರು ಕರ ನಿರಾಕರಣೆ ಮೊದಲಾದ ಚಳವಳಿಗಳಲ್ಲಿ ತೊಡಗಿಕೊಂಡು ಹಿಂಡಲಗಾ ಜೈಲಿನಲ್ಲಿ ಒಂದು ತಿಂಗಳುಗಳ ಕಾಲ ಬಂಧಿತರಾದರು. ಬಿಡುಗಡೆಯ ನಂತರ ಊರ ಜನರು ಅವರನ್ನು ಸನ್ಮಾನಿಸಿದರು. ಇದರ ನಂತರ ತಂದೆ-ತಾಯಿಗಳು ಇವರ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿದರು. ಮಹಾದೇವಿ ಅವರು ಪ್ರಭಾತಪೇರಿ, ಭಾಷಣ, ಉಪ್ಪು ತಯಾರಿಕೆ, ಪಿಕೇಟಿಂಗ್ ಮೊದಲಾದ ಚಳವಳಿಗಳಲ್ಲಿ ಪಾಲ್ಗೊಳ್ಳುತ್ತಿದ್ದರಿಂದ ಪೋಲಿಸರು ಅವರನ್ನು ಹಗಲೆಲ್ಲ ಬಂಧಿಸಿ ಸಂಜೆ ಬಿಡುಗಡೆ ಮಾಡುತ್ತಿದ್ದರು. ಪೋಲಿಸರ ಕಣ್ಣು ತಪ್ಪಿಸಿ ಭೂಗತ ನಾಯಕರಿರುವ ಹಳ್ಳಿಗಳಿಗೆ ಹೋಗಿ ಅವರಿಂದ ಹೋರಾಟದ ಕುರಿತು ಮಾರ್ಗದರ್ಶನ ಪಡೆಯುತ್ತಿದ್ದರು.1 ಹಿಂಡಲಗಿಯ ಜೈಲಿನಲ್ಲಿ 9 ತಿಂಗಳ ಜೈಲುವಾಸದ ನಂತರ ಶಿರಸಿಗೆ ಬಂದರು. ಆಗ ಗಾಂಧಿ ಅವರು ಮಹಾದೇವಿ ಅವರ ಸಾಹಸಿತನ, ಜೈಲುವಾಸದ ವಿಷಯಗಳನ್ನು ತಿಳಿದು ಮಹಾದೇವಿ ಅವರಿಗೆ 'ಚಲೇಗೀ ಮೇರೆ ಸಾತ್?'ಎಂದು ಕೇಳಿದರು. ಮರುದಿನ ಸಿದ್ದಾಪುರದಲ್ಲಿ ದೊಡ್ಡ ಸಭೆ ನಡೆದು ವೇದಿಕೆಯ ಮೇಲ ಗಾಂಧಿ ಅವರ ಜೊತೆ ಕುಳಿತ ಮಗಳನ್ನು ನೋಡಿದ ಮಹಾದೇವಿ ಅವರ ತಂದೆಗೆ ಆಶ್ಚರ್ಯ ಮತ್ತು ಸಂತೋಷವಾಯಿತು. ಅವರು ತುಂಬು ಹೃದಯದಿಂದ ಮಗಳನ್ನು ಗಾಂಧಿ ಜೊತೆ ವಾರ್ದಾಗೆ ಕಳುಹಿಸಿದರು. ಮಹಾದೇವಿ ಅವರು ಹಿಂದಿ, ಸಂಸ್ಕೃತ, ಆಂಗ್ಲ ಭಾಷೆಗಳನ್ನು ಕಲಿತು ಹೋರಾಟಗಾರರಿಗೆ ಮಾರ್ಗದರ್ಶನ ನೀಡುತ್ತಿದ್ದರು.2

**ಕಾಮೇಶ್ವರಮ್ಮ**

ಮದ್ರಾಸ್ ವಿಶ್ವವಿದ್ಯಾಲಯದ ಪದವೀಧರೆಯಾದ ಕಾಮೇಶ್ವರಮ್ಮನವರು ಕಾಕಿನಾಡಿನಲ್ಲಿ ಉಪ್ಪಿನ ಸತ್ಯಾಗ್ರಹ ಮಾಡಿ ಜೈಲು ಸೇರಿದರು. ಮೈಸೂರಿನ ಖ್ಯಾತ ಮನಃಶಾಸ್ತ್ರಜ್ಞ ಕುಪ್ಪುಸ್ವಾಮಿ ಅವರೊಂದಿಗೆ ಮದುವೆಯಾದ ಇವರು ಅಪಾರ ಸಂಪತ್ತಿದ್ದರೂ ಕಷ್ಟದ ಬದುಕನ್ನು ಸ್ವಾಗತಿಸಿದರು. ಖಾದಿ ಮಾರಾಟದ ನೆಪದಲ್ಲಿ ಮಹಿಳೆಯರಲ್ಲಿ ಸ್ವದೇಶಿ ಚಿಂತನೆ ಮತ್ತು ಚಳವಳಿಯನ್ನು ಪ್ರಚಾರ ಮಾಡಿದರು. 1937 ರಲ್ಲಿ ನಾರಿಮನ್ ಬಂದನದ ವಿರುದ್ಧ ಭಾಷಣ ಮಾಡಿದಾಗ ಗಡಿಪಾರಿಗೆ ಒಳಗಾದರು. ಇದರಿಂದ ವಿಚಲಿತರಾಗದೆ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭೂಗತರಾದವರಿಗೆ ತಮ್ಮ ಮನೆಯಲ್ಲಿ ಆಶ್ರಯ ನೀಡಿದರು.ಇವರು ತಮ್ಮ ಚಟುವಟಿಕೆಗಳಿಂದ ಪೋಲಿಸರ ಕೆಂಗಣ್ಣಿಗೆ ಗುರಿಯಾಗಿದ್ದರು.1947ರ ಸತ್ಯಾಗ್ರಹದಲ್ಲಿ ಮಹಿಳೆಯರನ್ನು ಗುಪ್ತ ಸಭೆ ಕರೆದು ಹೋರಾಟದಲ್ಲಿ ಪಾಲ್ಗೊಳ್ಳಲು ಹುರಿದುಂಬಿಸುತ್ತಿದ್ದರು. ಇವರು ಎ.ಐ.ಸಿ.ಸಿ ಸದಸ್ಯೆ ಅಷ್ಟೇ ಅಲ್ಲದೇ ಅನೇಕ ಸಂಘ-ಸAಸ್ಥೆಗಳಲ್ಲೂ ಕೆಲಸ ಮಾಡಿದರು.3

**ಸುಶೀಲಾಬಾಯಿ ಕುಲಕರ್ಣಿ**

ಸುಶೀಲಾಬಾಯಿ ಅವರ ತಂದೆ ದೊಂಡೋವಲ್ಲೋ ಕುಲಕರ್ಣಿ. ಬೆಳಗಾವಿಯ ಖ್ಯಾತ ಸ್ವಾತಂತ್ರ‍್ಯದ ಹೋರಾಟಗಾರರು. ಉಪ್ಪಿನ ಸತ್ಯಾಗ್ರಹದಲ್ಲಿ ಜೈಲು ಸೇರಿದಾಗ, ತಾಯಿ ಮಕ್ಕಳಿಬ್ಬರು ತಾವು ಅವರೊಡನೆ ಜೈಲು ಸೇರಲು ಇಚ್ಚಿಸಿದಾಗ, 'ನೀವು ಉಪ್ಪು ಮಾರಿ ನಿಮ್ಮನ್ನು ಹಿಡಿತಾರ' 4 ಎಂದರು. ಇಂಥ ಪರಿಸರದಲ್ಲಿ ಬೆಳೆದ ಇವರು ಪ್ರತಿನಿತ್ಯ ಪ್ರಭಾತಪೇರಿಗೆ ಹೋಗಿ ದೇಶಭಕ್ತಿ ಗೀತೆಗಳನ್ನು ಹಾಡುತ್ತಿದ್ದರು. ಇವರು ಸ್ವಾತಂತ್ರ‍್ಯದ ಹೋರಾಟಗಾರ ಜಯದೇವರಾಯ ಧ್ವಜ ಕಟ್ಟೆಯ ಕೆಳಗೆ ಸರಳವಾಗಿ ವಿವಾಹ ಮಾಡಿದರು. ವಧುವಿಗೆ ಎರಡು ಖಾದಿ ಸೀರೆಗಳು ಉಡುಗೊರೆಯಾಗಿ ಬಂದವು. ಗಂಡ ಹೆಂಡತಿ ಒಂದು ಕಡೆ ಇದ್ದು. ನೆಂಟರ ಬಳಿ ಮಕ್ಕಳನ್ನು ಇಟ್ಟಿದ್ದರು. 'ಯಾಕೆ ಹೀಗೆ ಕಷ್ಟ ಪಡುತ್ತಿರಿ?' ಎಂದು ಪೋಲಿಸರು ಕೇಳಿದಾಗ, 'ಹೀಗೆ ಆಗುವುದೆಂದು ಗೊತ್ತಿದ್ದೇ ನಾನು ಇವರನ್ನು ಮದುವೆಯಾದ' ಎಂದು ಹೇಳಿದರು. ಬೆಳಗಾವಿಯ


CO-ORDINATOR
IQAC
K.L.E.S' Arts & Commerce College
GADAG
PRINCIPAL
K.L.E. Society's
Arts & Commerce College
GADAG-BETGERI 582101

**Shodhak** : A Journal of Historical Research
ISSN : **0302-9832**
Volume: **53**, Issue: **02**, No: **10**, May - August : **2023**

ಸಂದಿಯೊAದರಲ್ಲಿ ಮನೆ ಮಾಡಿ ರಾಷ್ಟ್ರೀÃಯ ಕರಪತ್ರಗಳನ್ನು ಮುದ್ರಿಸುತ್ತಿದ್ದರು. ಇಲ್ಲಿ ಗುಪ್ತ ಸಭೆಗಳನ್ನು ಕರೆದು ಚರ್ಚಿಸುತ್ತಿದ್ದರು. ಚಳವಳಿಯ ಕೆಲಸಕ್ಕೆ ಹಣದ ಕೊರತೆ ಎದುರಾದಾಗ ತಮ್ಮ ಕೈಯಲ್ಲಿನ ಚಿನ್ನದ ಬಳೆಗಳನ್ನು ಮಾರಿ ದುಡ್ಡು ಕೊಟ್ಟರು. ಹೀಗೆ ಹೋರಾಟವೇ ತಮ್ಮ ಬದುಕನ್ನಾಗಿಸಿಕೊಂಡು ಜೀವನ ನಡೆಸಿದರು.

**ಶಾಂತಾಬಾಯಿ ಕರಮರಕರ**

ಸ್ವಾತಂತ್ರ್ಯ ಹೋರಾಟಗಾರರ ಮನೆತನಕ್ಕೆ ಸೇರಿದ ಇವರು ಗಂಡನೊAದಿಗೆ ಸತ್ಯಾಗ್ರಹದಲ್ಲಿ ತೊಡಗುವುದಷ್ಟೇ ಅಲ್ಲದೇ ವೈಯಕ್ತಿಕವಾಗಿಯೂ ಚಳವಳಿಯಲ್ಲಿದ್ದರು. 1943 ಆಗಸ್ಟ 9 ರಂದು ಧಾರವಾಡದ ಕ್ಲಾಕ್ ಟವರ್ ಬಳಿ ಸತ್ಯಾಗ್ರಹ ಆರಂಭಿಸಿದರು. ಕಂಕುಳಲ್ಲಿಯ ಆರು ತಿಂಗಳ ಕೂಸನ್ನು ಗೆಳತಿಯ ಕೈಯಲ್ಲಿ ಕೊಟ್ಟು ಭಾಷಣ ಮಾಡಿ ಬಂಧನಕ್ಕೆ ಒಳಗಾದರು. ಸೆರವಾಸದಲ್ಲಿ ಅಲ್ಲಿಯ ಹೆಣ್ಣು ಮಕ್ಕಳಿಗೆ ಶಿಕ್ಷಣದೊಂದಿಗೆ ದೇಶಭಕ್ತಿ ಗೀತೆಗಳನ್ನು, ನೂಲು ತೆಗೆಯುವುದನ್ನು ಹೇಳಿಕೊಡುತ್ತಿದ್ದರು. ಇವರೊಂದಿಗೆ ಶಾಂತಾಬಾಯಿ ದಾಬಡೆ ಅವರು ಲಗ್ನವಾಗಿ ಮರುದಿನದಿಂದಲೇ ಸ್ವಾತಂತ್ರ್ಯ ಹೋರಾಟಕ್ಕೆ ತೊಡಗುವುದಾಗಿ ಶಪತ ಮಾಡಿದರು.ಆರು ತಿಂಗಳ ಮಗುವಿನೊಂದಿಗೆ ಶಾಂತಾಬಾಯಿ ಕರಮರಕರ ಅವರೊಂದಿಗೆ ಭಾಷಣ ಮಾಡಿ ಆರು ತಿಂಗಳು ಜೈಲುವಾಸ ಅನುಭವಿಸಿದರು. ಬಿಡುಗಡೆಯಾಗಿ ಅಲ್ಲಿಂದ ಬಂದ ಮೇಲೆ ಆರ್ಥಿಕ ಬಿಕ್ಕಟ್ಟಿಗೆ ಒಳಗಾಗಿ ಬಂಧುಗಳ ಟೀಕೆಗೆ ಒಳಗಾದರು.5

**ಉಮಾಬಾಯಿ ಕುಂದಾಪುರ**

ಉಮಾಬಾಯಿ ಕುಂದಾಪುರ ಅವರು ಮುಂಬೈನಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ಹರೆಯದರಲ್ಲಿ ಕ್ಷಯ ರೋಗಪೀಡಿತ ಗಂಡನನ್ನು ಕಳೆದುಕೊಂಡರು. ಮಾವ ಆನಂದರಾವ ಕುಂದಾಪುರ ಅವರ ಚಿಕಿತ್ಸೆಗಾಗಿ ಹುಬ್ಬಳ್ಳಿಗೆ ಬಂದು ನೆಲಸಿದರು. ಹುಬ್ಬಳ್ಳಿಯಲ್ಲಿ ಮಹಿಳಾ ಜಾಗೃತಿ ಕಾರ್ಯ ಕೈಗೊಂಡು ಭಗಿನಿ ಮಂಡಳ ಕಟ್ಟಿದರು. ಇವರ ಮನೆ ಕರ್ನಾಟಕ ಪ್ರೆಸ್ ಜಾಗದಲ್ಲಿದ್ದರಿಂದ 1920-47 ರವರೆಗೆ ಈ ಸ್ಥಳ ರಾಷ್ಟ್ರೀÃಯ ಚಳವಳಿಯ ಕೇಂದ್ರವಾಗಿತ್ತು. ಇಲ್ಲಿಗೆ ಗಾಂಧಿ, ನೆಹರು, ಲಜಪತರಾಯ ಮೊದಲಾದವರು ಬಂದು ಹೋಗುತ್ತಿದ್ದರು. ಉಮಾಬಾಯಿ ಅವರು ಭೂಗತ ನಾಯಕರ ಉಪಚಾರ, ಪ್ರಭಾತ್‌ಪೇರಿ, ನೂಲುವುದು, ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸುತ್ತಿದ್ದರು. ಇವರು ಕಮಲಾದೇವಿ ಚಟ್ಟೋಪಾದ್ಯಾಯ ಅವರೊಂದಿಗೆ ಕರ್ನಾಟಕಾದ್ಯಂತ ಸಂಚರಿಸಿ ಜನರನ್ನು ಹೋರಾಟದಲ್ಲಿ ತೊಡಗಿಕೊಳ್ಳಲು ಭಾಷಣಗಳನ್ನು ಮಾಡಿದರು. ಹರ್ಡೇಕರರು ಸಿದ್ಧಗೊಳಿಸಿದ್ದ ಸ್ತ್ರೀÃ ಸೇವಾದಳದ ಮಹಾ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. ಬ್ರಿಟಿಷರು ಭಗಿನಿ ಮಂಡಳಿಯನ್ನು ಅಕ್ರಮ ಕೂಟವೆಂದು ಘೋಷಿಸಿ ಅವರನ್ನು ಜೈಲಿಗೆ ಹಾಕಿದರು. ಉಮಾಬಾಯಿ ಅವರು ನಂತರದಲ್ಲಿ ಕಸ್ತೂರಿಬಾ ವಿದ್ಯಾಲಯವನ್ನು ಅರಸೀಕೆರೆಯಲ್ಲಿ ಸ್ಥಾಪಿಸಿದರು.

**ಶಕುಂತಲಾ ಕುರ್ತುಕೋಟಿ**

ಶಕುಂತಲಾ ಅವರ ತಂದೆ-ತಾಯಿಗಳಿಬ್ಬರೂ ಸ್ವಾತಂತ್ರ್ಯ ಹೋರಾಟಗಾರರು. ಆದ್ದರಿಂದ ವಿದ್ಯಾರ್ಥಿ ದಿಸೆಯಲ್ಲಿಯೇ ಹೋರಾಟಕ್ಕಿಳಿದರು. ವಿದ್ಯಾರ್ಥಿಗಳೊಂದಿಗೆ ಸಭೆ, ಪಿಕೇಟಿಂಗ್, ಮೆರವಣಿಗೆಗಳನ್ನು ಮಾಡಿ ಜೈಲು ಸೇರಿದರು. ಹೊರಬಂದ ನಂತರ ಸೇವಾದಳದ ಮುಖ್ಯಸ್ಥೆಯಾದರು. ನಂತರ ಭೂಗತ ನಾಯಕರಾದ ಶಂಕರ ಕುರ್ತುಕೋಟಿ ಅವರನ್ನು ಮದುವೆಯಾದರು. 'ಈತನನ್ನು ಹಿಡಿದು ಕೊಟ್ಟವರಿಗೆ ಅಥವಾ ಅವರ ಹೆಣ ತಂದುಕೊಟ್ಟವರಿಗೆ ಎರಡು ಸಾವಿರ ರೂಪಾಯಿಗಳ ಬಹುಮಾನ' ಘೋಷಿಸಿದ್ದರು. ಶಕುಂತಲಾ ಅವರು ಧಾರವಾಡದಲ್ಲಿ ಗಾಂಧಿ ಪ್ರತಿಷ್ಠಾನ ಆರಂಭಿಸಿ ಈ ಮೂಲಕ ಗಾಂಧಿ ಚಿಂತನೆಗಳನ್ನು ಪ್ರಚಾರ ಮಾಡುತ್ತಿದ್ದರು. ಇವರು ನೇರವಾಗಿ ಏಕೀಕರಣ ಚಳವಳಿಯಲ್ಲಿ ಪಾಲ್ಗೊಳ್ಳದೇ ಚಳವಳಿಗಾರರಿಗೆ ಬೆಂಬಲ ನೀಡುತ್ತಿದ್ದರು.6



CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG
.2101

**ಕೃಷ್ಣಾಬಾಯಿ ಪಣಜಿಕರ್**

ಹೊನ್ನಾಪುರದಲ್ಲಿ ಹುಟ್ಟಿದ ಇವರು ಗುಲವಾಡಿ ಎನ್ನುವರನ್ನು ವಿವಾಹವಾಗಿ ಆರು ತಿಂಗಳಲ್ಲೇ ವಿದವೆಯಾದರು. ಆಶ್ರಯಕ್ಕಾಗಿ ಧಾರವಾಡದ ಅಣ್ಣನ ಮನೆ ಸೇರಿದರು. ಮುಂದೆ ಪಣಜಿಕರ್ ಎನ್ನುವರನ್ನು ಮದುವೆಯಾಗಿ ಧಾರವಾಡದಲ್ಲೇ ನೆಲೆಸಿದರು. ಅದನ್ನೇ ತಮ್ಮ ಹೋರಾಟದ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು. 1932 ರಲ್ಲಿ ಜನತೆಯಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸಲು ಪ್ರವಾಸ ಕೈಗೊಂಡರು. ಕೃಷ್ಣಾಬಾಯಿ ಅವರ ಉಗ್ರ ಭಾಷಣಕ್ಕೆ ಬ್ರಿಟಿಷರು ಅವರನ್ನು ಯರವಾಡದ ಜೈಲಿಗೆ ಸೇರಿಸಿದರು. 6 ತಿಂಗಳ ಜೈಲುವಾಸ, 300 ರೂಪಾಯಿಗಳನ್ನು ದಂಡವಾಗಿ ವಿಧಿಸಿದರು. ಕನ್ನಡ ಮತ್ತು ಮರಾಠಿ ಭಾಷೆ ಬಲ್ಲವರಾಗಿದ್ದ ಇವರು ಸೆರಮನೆಯ ಬಿಡುಗಡೆಯ ನಂತರ ಮತ್ತೇ ಪ್ರವಾಸ ಕೈಗೊಂಡು ಜನತೆಯಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸುತ್ತಿದ್ದರು. ರತ್ನಗಿರಿಗೆ ಹೋಗಿ ಮರಾಠಿಯಲ್ಲಿ ಭಾಷಣ ಮಾಡಿ ಬಂಧಿತರಾದರು. 1941 ರಲ್ಲಿ ವೈಯಕ್ತಿಕ ಸತ್ಯಾಗ್ರಹ ಕೈಗೊಂಡಾಗ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ 1 ವರ್ಷ ಜೈಲುವಾಸ ಅನುಭವಿಸಿದರು.

**ನಾಗಮ್ಮ ವೀರನಗೌಡ**

ನಾಗಮ್ಮ ಅವರು ಹೆಸರಾಂತ ಕಾಂಗ್ರೆಸ್‌ನ ನಾಯಕ ವೀರನಗೌಡ ಪಾಟೀಲರ ಹೆಂಡತಿ. ವಿದಾನಸಭೆಯ ಸದಸ್ಯರಾಗಿದ್ದ ನಾಗಮ್ಮ ಪಾಟೀಲರು ಶಾಸನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಸೆರಮನೆ ಸೇರಿದರು. ಹರಿಜನ ಸೇವೆಗೆ ಮುಂದಾಗಿ ಹರಿಜನ ಬಾಲಿಕಾಶ್ರಮವನ್ನು ಆರಂಭಿಸಿ ಅದರ ಜವಾಬ್ದಾರಿಯನ್ನು ಅವರೇ ನಿರ್ವಹಿಸಿದರು.7 ಇವರ ಗಂಡ ವೀರನಗೌಡ, ಮಗಳು ಲೀಲಾವತಿ ಮಾಗಡಿ, ಅಳಿಯ ವಿ.ಟಿ. ಮಾಗಡಿ ಎಲ್ಲರೂ ಸ್ವಾತಂತ್ರ್ಯದ ಹೋರಾಟದಲ್ಲಿ ತೊಡಗಿ ಜೈಲು ಸೇರಿದಾಗ ಹರಿಜನ ಬಾಲಿಕಾಶ್ರಮದ ಎಲ್ಲಾ ವಿದ್ಯಾರ್ಥಿಗಳು ಹೋರಾಟಕ್ಕೆ ಇಳಿದು ಜೈಲು ಸೇರಿದರು.

**ಯಶೋಧರಾ ದಾಸಪ್ಪ**

1938ರ ಜನವರಿಯಲ್ಲಿ ಶಿವಪುರದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಮೈಸೂರಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಮತ್ತು ಬ್ರಿಟಿಷ್ ರೆಸಿಡೆಂಟ್‌ರು ಈ ಅಧಿವೇಶನದಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸುವುದನ್ನು ವಿರೋಧಿಸಿದರು. ಮಹಿಳೆಯರು ರಾಷ್ಟ್ರ ಧ್ವಜವನ್ನು ಹಾರಿಸತಕ್ಕದ್ದೆಂದು ನಿರ್ಣಯ ಕೈಗೊಂಡರು. ಬೆಳಗ್ಗೆ ಧ್ವಜಾರೋಹಣ ತಡೆಗಟ್ಟಲು ಪೋಲಿಸರು ಬಂದು ಅಧ್ಯಕ್ಷರನ್ನು ಬಂದಿಸಿದರು. ಆಗ ಎಂ.ಎA ಜೋಯಿಶ್ ಅವರು ಧ್ವಜವನ್ನು ಹಾರಿಸಿದರು. ಆಗ ಧ್ವಜವನ್ನು ಇಳಿಸಲು ಪೋಲಿಸರು ಮುಂದಾದಾಗ ಸ್ವಯಂಸೇವಕಿಯರು ತಡೆಗಟ್ಟಲು ಮುಂದಾದರು. ಅವರಲ್ಲಿ ಯಶೋಧರಮ್ಮನವರು ಒಬ್ಬರು. ರಾತ್ರಿ ಪೂರ್ತಿ ಧ್ವಜವನ್ನು ಕಾದರು. ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಏಕೈಕ ಮಹಿಳೆ ಅವರಾಗಿದ್ದರು. ಪ್ರಜಾಪಕ್ಷದಲ್ಲಿದ್ದ ಎಚ್.ಸಿ ದಾಸಪ್ಪನವರೊಡನೆ ವಿವಾಹವಾದ ಇವರು ಕಾಂಗ್ರೆಸ್‌ನಲ್ಲಿ ಗಂಡನೊಡನೆ ಸಕ್ರೀಯರಾದರು. ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಹೇರಿದ್ದ ದಾಸಪ್ಪನವರು ಮೈಸೂರು ರಾಜ್ಯದಲ್ಲಿ ಮಂತ್ರಿ ಪದವಿಯನ್ನು, ಲೋಕಸಭೆಯ ಸದಸ್ಯತ್ವ ಹಾಗೂ ಕೇಂದ್ರ ಸರ್ಕಾರದಲ್ಲಿ ರೈಲ್ವೇ ಸಚಿವರೂ ಆಗಿದ್ದರು.

**ಬಳ್ಳಾರಿ ಸಿದ್ದಮ್ಮ**

2ನೇ ತರಗತಿಯವರೆಗೆ ಓದಿದ್ದ ಬಳ್ಳಾರಿ ಸಿದ್ದಮ್ಮನವರು ಅಪಾರವಾದ ಅನುಭವವನ್ನು ಹೊಂದಿದ್ದರು. ಇವರ ಪತಿ ಮುರಿಗೆಪ್ಪ. ಇವರು ಕನ್ನಡದಲ್ಲಿ ಒಳ್ಳೆಯ ಮಾತುಗಾರರಾಗಿದ್ದು ದಾವಣಗೆರೆಯಲ್ಲಿ ನೆಲೆಸಿದ್ದರು. ಮೈಸೂರು ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಮೈಸೂರು ಸಂಸ್ಥಾನದಲ್ಲೆಡೆ ಸಂಚರಿಸಿ ಜನಜಾಗೃತಿ ಮೂಡಿಸಿದರು. ಮೈಸೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಪ್ರಚಾರಕ್ಕಾಗಿ ಯಶೋಧರಮ್ಮನೊಂದಿಗೆ ತೆರಳಿದ್ದರು. ಸಿದ್ದಮ್ಮನವರು ಗುಂಡ್ಲುಪೇಟೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಿದ್ದಾಗ ಸಭೆಯಲ್ಲಿ ಒಂದು ದೊಡ್ಡ ಕಲ್ಲು ಅವರ ಹಣೆಗೆ ಬಂದು ಬಿದ್ದು ರಕ್ತ ಸುರಿಯುತ್ತಿತ್ತು. ಸಿದ್ದಮ್ಮನವರು ರಕ್ತವನ್ನು ಕೈಯಿಂದ ಬಳಿದು ನೆಲದ ಮೇಲೆ ಚೆಲ್ಲಿದರು. ಸಭೆಯನ್ನುದ್ದೇಶಿಸಿ ಮಾತು ಮುಂದುವರೆಸಿ 'ಭಾರತ ಮಾತೆಯ ಬಿಡುಗಡೆಗಾಗಿ ಪಣ



CO-ORDINATOR
IQAC
Arts & Commerce College
PRINCIPAL
K.L.E. Society's
Arts & Commerce College
GADAG-BETGERI-582101

Shodhak : A Journal of Historical Research
ISSN : 0302-9832
Volume: 53, Issue: 02, No: 10, May - August : 2023
ತೊಟ್ಟವಳು ನಾನು. ಅದಕ್ಕಾಗಿ ಎಷ್ಟು ರಕ್ತವನ್ನಾದರೂ ಚೆಲ್ಲಲು ಸಿದ್ಧ. ಈ ಬಗೆಯ ಬೆದರಿಕೆಗೆ ಸೊಪ್ಪು ಹಾಕುವಳಲ್ಲ ನಾನು. ಇನ್ನು ಹತ್ತು ಕಲ್ಲುಗಳನ್ನು ನನ್ನ ಮೇಲೆ ಎಸೆಯುತ್ತೀರಿ. ಭಾರತಾಂಬೆಯ ಬಿಡುಗಡೆಗಾಗಿ ಹೋರಾಡುತ್ತ ನನ್ನ ಪ್ರಾಣವನ್ನಾದರೂ ಕೊಡಲು ತಯಾರಿದ್ದೇನೆ.'8 ಎಂದು ಹೇಳಿದರು. ಕಾಂಗ್ರೆಸ್ಸಿನ ಕಾರ್ಯಸಮಿತಿಯಲ್ಲಿದ್ದು ಬಹಳ ಸಾರಿ ಜೈಲು ಸೇರಿದರು. ಸೆರೆಮನೆಯಲ್ಲಿದ್ದಕ್ಕೆ ದಾಖಲೆ ಇಲ್ಲದ್ದರಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳು ನೀಡುವ ಸ್ವಾತಂತ್ರ್ಯ ಹೋರಾಟಗಾರರ ಸನ್ಮಾನ, ಪೆನ್ಷನ್ ದೊರೆಯಲಿಲ್ಲ. ಅವರು ತಮ್ಮ ಕೊನೆಗಾಲವನ್ನು ತುಂಬ ಬಡತನದಲ್ಲೇ ಕಳೆದರು.

**ಚೆನ್ನಮ್ಮ ಹಳ್ಳಿಕೇರಿ**

ಅಜ್ಜ ವೆಂಕಟೇಶ ಮಾಗಡಿ ಹಾಗೂ ಗುದ್ಲೆಪ್ಪ ಹಳ್ಳಿಕೇರಿ ಸ್ವಾತಂತ್ರ್ಯ ಹೋರಾಟಗಾರರು. ಇವರ ಮೊಮ್ಮಗಳೆ ಚೆನ್ನಮ್ಮ ಹಳ್ಳಿಕೇರಿ. 1930-40 ರಲ್ಲಿ ಹೊಸರಿತ್ತಿ ಗ್ರಾಮದಲ್ಲಿ ಗಾಂಧಿ ಸೇವಾಶ್ರಮ ಆರಂಭಿಸುತ್ತಾರೆ. ಇದರಡಿಯಲ್ಲಿ ಅಸ್ಪೃಶ್ಯತೆ ನಿವಾರಣೆ, ಹರಿಜನೋದ್ಧಾರ, ಗ್ರಾಮ ಸೇವಾ ಸಫಾಯಿ, ಖಾದಿ ಉತ್ಪಾದನೆ ಹಾಗೂ ಗುಡಿ ಕೈಗಾರಿಕೆಗಳು ಚಾಲನೆಯನ್ನು ಪಡೆದವು. ಬಾಲ್ಯದಲ್ಲೇ ಈ ಎಲ್ಲಾ ಸಂಗತಿಗಳು ಚೆನ್ನಮ್ಮರನ್ನು ಪ್ರಭಾವಿಸಿದ್ದವು. ತಂದೆಯ ಬೆಂಬಲದಿAದ ತಮ್ಮ 12ನೇ ವಯಸ್ಸಿಗೆ ಸ್ವಾತಂತ್ರ್ಯ ಹೋರಾಟದ ಹಾದಿಯನ್ನು ತುಳಿಯುತ್ತಾರೆ. ಕಸ್ತೂರಿ ಬಾ ಅವರು ಫೆಬ್ರುವರಿ 23, 1944 ರಲ್ಲಿ ಮರಣ ಹೊಂದಿದಾಗ, ದೇಶದ ನಾನಾ ಭಾಗಗಳಲ್ಲಿ ಕಸ್ತೂರಿ ಬಾ ಕೇಂದ್ರಗಳು ಆರಂಭವಾದವು. ಇದರಡಿ ಹೊಸರಿತ್ತಿಯಲ್ಲೂ ಕಸ್ತೂರಿ ಬಾ ಕೇಂದ್ರ ಪ್ರಾರಂಭವಾಯಿತು. ಚೆನ್ನಮ್ಮ ಹಳ್ಳಿಕೇರಿ ಅವರು ಸಂದರ್ಶನದ ಮೂಲಕ ಅಲ್ಲಿ ಆಯ್ಕೆಯಾದರು. ವಿನೋಬಾ ಅವರೊಂದಿಗೆ ಚೆನ್ನಮ್ಮ ಅವರು ಸಂಚರಿಸಿದರು. ಕರ್ನಾಟಕದವರಾದ ಚೆನ್ನಮ್ಮ ಹಳ್ಳಿಕೇರಿ, ಮೀರಾತಾಯಿ ಕೊಪಿಕರ್, ಭಾಗೀರತಿ, ಲಕ್ಷ್ಮೀಮA ಎನ್ನುವ ನಾಲ್ಕು ಜನ ಮಹಿಳೆಯರು ಕಾರವಾರದಲ್ಲಿ ವಿನೋಭಾ ಅವರ ಸಮ್ಮುಖದಲ್ಲಿ ಭೂದಾನ ಕಾರ್ಯದಲ್ಲಿ ತೊಡಗಿಕೊಳ್ಳುತ್ತಾರೆ. ಬೆಳಗಾವಿಯಲ್ಲಿ ವಿನೋಭಾ ಅವರ ಆಜ್ಞೆಯಂತೆ ಈ ನಾಲ್ಕು ಜನ ಮಹಿಳೆಯರು ಭೂದಾನ ಚಳವಳಿಯಲ್ಲಿ ತೊಡಗಿಕೊಂಡರು. ಚೆನ್ನಮ್ಮ ಅವರು ಕರ್ನಾಟಕವಲ್ಲದೆ ಮಹಾರಾಷ್ಟ್ರ, ಮಧ್ಯಪ್ರದೇಶ, ಬಿಹಾರ, ಅಸ್ಸಾಂ ರಾಜ್ಯಗಳಿಗೆ ವಿನೋಭಾ ಅವರೊಂದಿಗೆ ಪಾದಯಾತ್ರೆಯ ಮೂಲಕ ಭೂದಾನ ಚಳವಳಿಯಲ್ಲಿ ಪಾಲ್ಗೊಂಡರು. ವಿನೋಬಾ ಅವರು ಮಹಾರಾಷ್ಟ್ರದ ವಾರ್ಧಾ ಜಿಲ್ಲೆಯ ಪವನಾರದಲ್ಲಿ ಹೆಣ್ಣುಮಕ್ಕಳಿಗಾಗಿ ಬ್ರಹ್ಮವಿದ್ಯಾ ಮಂದಿರವನ್ನು ಆರಂಭಿಸುತ್ತಾರೆ. ಅಲ್ಲಿ 1959 ಜುಲೈ ನಲ್ಲಿ ಚೆನ್ನಮ್ಮ ಸೇರಿಕೊಳ್ಳುತ್ತಾರೆ. ಚೆನ್ನಮ್ಮ ಅವರು ಅಂದಿನಿAದ ಇಂದಿನವರೆಗೂ ಗಾಂಧಿ ಹಾಗೂ ವಿನೋಭಾ ಅವರ ತತ್ವ ಪ್ರಚಾರದಲ್ಲಿ ತೊಡಗಿದ್ದಾರೆ. ಇವರು ಗಾಂಧಿ ಅವರ 150ನೇ ಜನ್ಮದಿನಾಚರಣೆ ನಿಮಿತ್ತ 150 ಕಡೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರ ತತ್ವ ಸಿದ್ಧಾಂತಗಳನ್ನು ಪ್ರಸಾರ ಮಾಡಿದರು. ವಿನೋಬಾ ನಾಗರಿ ಪ್ರಶಸ್ತಿ (1994), ದೇಶಸ್ನೇಹಿ ಪ್ರಶಸ್ತಿ (1996), ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿ (2016), ಮಹಾವೀರ ಜೈನ ಪ್ರಶಸ್ತಿ (2019) ಗಳನ್ನು ಪಡೆದುಕೊಂಡಿದ್ದಾರೆ. ದಿನಾಂಕ: 16-12-2019 ರಂದು ಕನ್ನಡ ವಿಶ್ವವಿದ್ಯಾಲಯ ಒನಕೆ ಓಬವ್ವ ಪೀಠದಿಂದ ಸನ್ಮಾನಿಸಲಾಯಿತು.9

ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಮಹಿಳೆ, ಮಕ್ಕಳು ತೊಡಗಿಕೊಂಡರು. 1930 ರಲ್ಲಿ ಹರಪನಹಳ್ಳಿಯ ಮಹಿಳೆಯರು ಮೊದಲ ಬಾರಿಗೆ ಪ್ರಭಾತಪೇರಿ ನಡೆಸಿ ಉಪ್ಪಿನ ಸತ್ಯಾಗ್ರಹದಲ್ಲಿ ಬಂಧನಕ್ಕೆ ಒಳಗಾದರು. ತುಮಕೂರಿನಲ್ಲಿ ಜಿ.ಸಿ.ಭಾಗೀರಥಮ್ಮ, ಕಾರ್ನಾಡ್ ಸದಾಶಿವರಾವ್ ಅವರ ಹೆಣ್ಣುಮಕ್ಕಳಾದ ರಾಧಾ ಮತ್ತು ಸುಗುಣ, ಕುಂತಳಾ ಸೇತುರಾವ್ ಅವರು ವಿದ್ಯಾರ್ಥಿ ದಿಸೆಯಿಂದಲೇ ಸಂಘಟನೆ, ಪಿಕೇಟಿಂಗ್‌ಗಳಲ್ಲಿ ತೊಡಗಿದ್ದರು. ಸುಬ್ಬಮ್ಮ ಜೋಯಿಸ್‌ರು ಗಂಡನ ಜೊತೆ ಶಿರಸಿ, ಸಿದ್ದಾಪುರಗಳಲ್ಲಿ ಚಳವಳಿ ತೀವ್ರಗೊಳ್ಳಲು ಕಾರಣರಾದರು.

ಸುಖ-ಶಾಂತಿ-ನೆಮ್ಮದಿಯಿAದ ಬದುಕಬೇಕಾದ ಮಹಿಳೆಯರು ಗಂಡನೊಡನೆ ಹಾಗೂ ಸ್ವಯಂ ಪ್ರೇರಣೆಯಿಂದ ಸ್ವಾತಂತ್ರ್ಯ ಹೋರಾಟ ಹಾಗೂ ಏಕೀಕರಣ ಹೋರಾಟದಲ್ಲಿ ಪಾಲ್ಗೊಂಡರು. ಹಲವರು ಎಲೆಮರೆ ಕಾಯಿಯಂತೆ ಭೂಗತರಿಗೆ ಸಹಾಯ ಮಾಡಿ ಗಂಡ, ಮಕ್ಕಳು, ಬಂಧುಗಳನ್ನು ಕಳೆದುಕೊಂಡರು. ಮನೆಯವರಿಂದ ದೂರವಿದ್ದು ಜೈಲುವಾಸವನ್ನು ಅನುಭವಿಸಿದವರು ಕೆಲವರು. ಆಸ್ತಿ, ಅಂತಸ್ತನ್ನು ಕಳೆದುಕೊಂಡು ಜೈಲನ್ನೇ ಮನೆಯಾಗಿಸಿಕೊಂಡು


CO-ORDINATOR
IQAC
K.L.E.S' Arts & Commerce College
GADAG
PRINCIPAL
K.L.E. Society's
Arts & Commerce College
GADAG-BETGERI-582101

ಬದುಕಿದವರು ಇದ್ದರು. ಮಹಿಳೆಯರು ತಾವು ಅನುಭವಿಸಿದ ಕಷ್ಟಗಳೊಂದಿಗೆ ನಿಷ್ಠೆ, ನಿರ್ಭಯತೆ, ಸಾಹಸ, ದಕ್ಷತೆ, ಕಾರ್ಯಪರತೆ ಮುಖ್ಯವಾಗುತ್ತದೆ.

**ಟಿಪ್ಪಣಿಗಳು**

1. ವಿಠಲ್ ಮೂರ್ತಿ ಐ ಎಂ (ಸಂ)., ಕನ್ನಡ ನುಡಿ, ಸಂ-51, ಸಂ-23,24, ಪು.ಸಂ-5
2. ಸರೋಜಿನಿ ಶಿಂತ್ರಿ., (1986), ಭಾರತ ಸ್ವಾತಂತ್ರö¨ಯ ಹೋರಾಟದಲ್ಲಿ ಕರ್ನಾಟಕ ಮಹಿಳೆಯರ ಪಾತ್ರ, ಪು.ಸಂ-17
3. ವಿಠಲ್ ಮೂರ್ತಿ ಐ ಎಂ., ಕನ್ನಡ ನುಡಿ, ಸಂ-51, ಸಂ-23,24, ಪು.ಸಂ-7
4. ಚAದ್ರಕಾAತ ಪಡೇಸೂರ್ ಹಾಗೂ ಶಿವಸ್ವಾಮಿ ಜಿ ವಿ (ಸಂ)., (1986), ಕನ್ನಡ ನುಡಿ, ಅನುಪಮ ನಿರಂಜನ (ಲೇ), ಭಾರತ ಸ್ವಾತಂತ್ರ ಸಂಗ್ರಾಮಕ್ಕೆ ಕರ್ನಾಟಕ ಮಹಿಳೆಯರ ಪಾತ್ರ(ಲೇ), ಸಂ-22, ಸಂ-49, ಪು.ಸಂ-07
5. ಅದೇ., ಪು.ಸಂ-08
6. ವಿಜಯಲಕ್ಷ್ಮಿö¨ಮÃ (ಸಂ)., (2013), ಸಾಮಾಜಿಕ ಸಾಧಕಿಯರು, ಸಂ-06, ಪು.ಸಂ-08
7. ಅದೇ., ಪು.ಸಂ-22
8. ನಾಗಯ್ಯ ಹಿ ಮ (ಸಂ)., ಕನ್ನಡ ನುಡಿ, ರಾಯಚೂರು ಜಿಲ್ಲಾಸಾಹಿತ್ಯ ಸಮ್ಮೇಳನ, ಸಂ-35, ಸಂ-2,ಪು.ಸA-02
9. 'ಆಧುನಿಕ ಪೂರ್ವ ಸಂದರ್ಭ: ಆಡಳಿತ ನಿರ್ವಹಿಸಿದ ರಾಣಿಯರು' , ವಿಚಾರ ಸಂಕಿರಣ ಪರಿಚಯ ಭಾಷಣ, (17-12-2019), ಇವಳ ಚರಿತ್ರೆ-3, ಕನ್ನಡ ವಿಶ್ವವಿದ್ಯಾಲಯ, ಹಂಪಿ.

COORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101